ಶ್ರೀ ಆರ್. ಎಲ್. ಜಾಲಪ್ಪ.— ನಾನು ಈಗಾಗಲೇ ಹೇಳಿದ್ದೇನೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಈ ಫೈರ್ ಸ್ಟೇಷನ್‌ಗಳನ್ನು ಮಾಡುವುದಕ್ಕೆ ಹಲವಾರು ಕಾರಣಗಳಿಂದ ಸಾಧ್ಯವಾಗುತ್ತಿಲ್ಲ. ಮುಂದೆ ಇದರ ಅವಶ್ಯಕತೆ ಬಂದಾಗ ನೋಡೋಣ.

ಬೆಂಗಳೂರು ಉತ್ತರ ತಾಲ್ಲೂಕಿನ ಚೋಳನಾಯ್ಕನ ಹಳ್ಳಿಯಲ್ಲಿ ಸೊಳ್ಳೆ ಹಾವಳಿ

೧೯೦. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಉತ್ತರ ತಾಲ್ಲೂಕಿನ ಚೋಳನಾಯ್ಕನ ಹಳ್ಳಿಯ ಸುತ್ತಮುತ್ತಲ ಪ್ರದೇಶದಲ್ಲಿ ಸೊಳ್ಳೆಕಾಟ ಜಾಸ್ತಿಯಾಗಿ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಜನರ ತೊಂದರೆಯನ್ನು ನಿವಾರಿಸುವಲ್ಲಿ ಸರ್ಕಾರದವರು ಕೈಗೊಂಡಕ್ರಮ ಗಳೇನು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿ ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಬಂದಿದೆ.

ಆ) ಈ ಪ್ರದೇಶದಲ್ಲಿ ಮಲೇರಿಯಾ ಖಾಯಿಲೆಯು ಕೇಂದ್ರ ಸರ್ಕಾರದ ನಿಗದಿಪಡಿಸಿರುವ ಮಟ್ಟದಲ್ಲಿ ಅಂದರೆ ಅನ್ಯುಯಲ್ ಪ್ಯಾರಾಸೈಟಿಕ್ಸ್ ಇಂಡೆಕ್ಸ್ ಎರಡು ಮತ್ತು ಮೇಲ್ಪಟ್ಟು ಇಲ್ಲ ಆದರೂ ಸಹ ರೋಗ ಪತ್ತೆ ಹಚ್ಚಲು ಕೇಂದ್ರ ಸರ್ಕಾರದ ನಿಬಂಧನೆಗಳಿಗನುಗುಣವಾಗಿ ಪ್ರತಿ ೧೫ ದಿವಸ ಗಳಿಗೊಮ್ಮೆ ಸಾರ್ವಜನಿಕ ರಕ್ತ ಲೇಪನಗಳನ್ನು ಸಂಗ್ರಹಿಸಿ ಪರೀಕ್ಷೆ ಮಾಡಲಾಗುತ್ತಿದೆ. ಈ ಪ್ರದೇಶ ದಲ್ಲಿ ರೋಗ ಪ್ರಕರಣಗಳು ಪತ್ತೆಯಾಗಿಲ್ಲ ರೋಗ ಪ್ರಕರಣಗಳು ಪತ್ತೆಯಾದಾಗ ಮಾತ್ರ ಮನೆಗಳಿಗೆ ಔಷಧಿ ಸಿಂಪರಣಾ ಕ್ರಮ ಕೈಗೊಳ್ಳಲಾಗುವುದು.

ಗ್ರಾಮದ ಪಕ್ಕದಲ್ಲಿ ಬೆಂಗಳೂರಿನ ಉತ್ತರ ಭಾಗ ಹಾಗೂ ಹೆಬ್ಬಾಳ ಪಶುವೈದ್ಯ ಶಾಲಾ ಕಾಲೇಜು ಕಡೆಗಳಿಂದ ಚರಂಡಿ ನೀರು ಹರಿದು ಬರುತ್ತದೆ. ಇದು ಪಕ್ಕದ ನಾಗಾವರ ಕಡೆಗೆ ಸೇರುತ್ತದೆ. ಈ ನೀರನ್ನು ಚೋಳನಾಯ್ಕ ಹಳ್ಳಿಯ ಗ್ರಾಮಸ್ಥರು ಈ ಚರಂಡಿಗೆ ಅಡ್ಡಗಟ್ಟು ಹಾಕಿ ಈ ನೀರನ್ನು ಗದ್ದೆ ಅಥವಾ ತೋಟಗಳಿಗೆ ಉಪಯೋಗಿಸುತ್ತಿದ್ದುದು ಕಂಡು ಬಂದಿದೆ. ಇದರಿಂದಾಗಿ ಚರಂಡಿ ನೀರು ಸಂಲಲಿತವಾಗಿ ಹರಿದು ಹೋಗದೆ ಅಲ್ಲಲ್ಲಿ ನಿಂತು ಸೊಳ್ಳೆಗಳ ಉತ್ಪತ್ತಿಗೆ ಕಾರಣವಾಗಿದೆ. ಇದಕ್ಕೆ ಬೆಂಗಳೂರು ನೀರು ಸರಬರಾಜು ಮಂಡಳಿ ಹಾಗೂ ಜನಾರೋಗ್ಯ ಇಂಜಿನಿಯರ್ ಇಲಾಖೆಯವರು ಕ್ರಮ ಕೈಗೊಂಡರೆ ಸೊಳ್ಳೆಗಳಿಂದ ಹರಡುವ ಖಾಯಿಲೆಗಳು ಬಹುಮಟ್ಟಿಗೆ ಕಡಿಮೆಯಾಗುವ ಸಂಭವ ವಿದೆ.

ಮಳೆ ಬಿದ್ದರೆ ಸೊಳ್ಳೆಗಳು ಕಡಿಮೆಯಾಗುತ್ತವೆ. ಮಳೆ ಇಲ್ಲದೇ ಇರುವುದರಿಂದ ಸ್ವಲ ಜಾಸ್ತಿ ಯಾಗಿದೆ. ಮಲೇರಿಯಾ ಖಾಯಿಲೆ ಹರಡತಕ್ಕದ್ದು ಸೊಳ್ಳೆಗಳು ಅಲ್ಲವೆಂದು ತಿಳಿದು ಬಂದಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ನಾನು ಮಲೇರಿಯಾ ಸೊಳ್ಳೆ ಎಂದು ಹೇಳಲಿಲ್ಲ. ಕಾಟ ಸಿಕ್ಕಾಪಟ್ಟೆ ಇದೆ. ಈ ವಿಷಯವನ್ನು ಅಲ್ಲಿನ ಜನರೇ ಹೇಳಿದ್ದಾರೆ. ಇದು ಮಾನ್ಯ ಬಸವಲಿಂಗಪ್ಪನವರ ಕ್ಷೇತ್ರ ಅಲ್ಲಿರತಕ್ಕ ಜನರಿಗೆ ಇದೇ ಒಂದು ಗೋಳು ಆಗಿದೆ. ಹೆಬ್ಬಾಳ ಪಶು ವೈದ್ಯ ಶಾಲಾ ಕಾಲೇಜು ಕಡೆಗಳಿಂದ ಚರಂಡಿ ನೀರು ಹರಿದು ಬರುತ್ತದೆ ಎಂದು ತಾವು ಹೇಳಿದ್ದೀರಿ. ಈ ಚರಂಡಿಯ ನೀರನ್ನು ಪ್ರತ್ಯೇಕವಾಗಿ ಹರಿದುಹೋಗಬೇಕೆಂದು ಇರುವಾಗ. ನೀವು ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ಈ ನೀರನ್ನು ಆ ಗ್ರಾಮದ ಜನರು ಗದ್ದೆಗೆ ಉಪಯೋಗಿ ಸುತ್ತಿದ್ದಾರೆಂಬ ವಿಷಯ ತಿಳಿದಿರಬಹುದು. ಆದರೆ ಇದು ಕಾನೂನಿಗೆ ವಿರುದ್ಧವಾಗಿದೆ. ನೀವು ಇದನ್ನೇ ಮುಂದುವರಿಸಿಕೊಂಡು ಹೋಗುತ್ತೀರಾ ? ಊರಿನ ಒಳಗಡೆ ಯಾವುದೇ ರೀತಿಯಾದ ಅನುಕೂಲತೆ ಗಳು ಇಲ್ಲ. ಚರಂಡಿ ಕ್ಲೀನ್ ಮಾಡುವುದು, ಮೋರಿ ಕ್ಲೀನ್ ಮಾಡುವುದು ಇತ್ಯಾದಿ ಕೆಲಸಗಳು ಆಗುತ್ತಾ ಇಲ್ಲ. ತಾವು ಇದರ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶ ನೀಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಈಗ ಒಂದು ಸಾವಿರ ರಕ್ತಲೇಪನದ ಸ್ಯಾಂಪಲ್‌ಗಳನ್ನು ಪರೀಕ್ಷೆ ಮಾಡಿದರೆ ಅದರಲ್ಲಿ ಎರಡು ಪರ್ಸೆಂಟಾದರೂ ಮೆಲೇರಿಯಾ ರೋಗದ ಅಂಶ ಇದ್ದರೆ ಮಾತ್ರ ಅಲ್ಲಿ ಸಿಂಪರಣೆ ಮಾಡ ತಕ್ಕ ಕೆಲಸ ತೆಗೆದುಕೊಳ್ಳುವುದಕ್ಕೆ ಕೇಂದ್ರ ಸರಕಾರದವರು ಅನುಮತಿ ಕೊಡುತ್ತಾರೆ. ಇಲ್ಲದೇ ಹೋದರೆ ನಮ್ಮ ರಾಜ್ಯ ಸರಕಾರದಿಂದಲೇ ಸಿಂಪರಣಾ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ ವೆಚ್ಚ ಜಾಸ್ತಿ ತಗಲುತ್ತದೆ. ಅದಕ್ಕೋಸ್ಕರ ನಾನು ಒಳಚರಂಡಿ ಇಲಾಖೆಗೆ, ಈ ರೀತಿ ಒಳ ಚರಂಡಿಗಳು ಒಡೆಯದ ಹಾಗೆ ನೋಡಿಕೊಳ್ಳುವುದರ ಬಗ್ಗೆ, ಕ್ರಮ ತೆಗೆದುಕೊಳ್ಳಬೇಕೆಂದು ಪತ್ರ ಬರೆದಿರುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಈಗ ಕೊಶ್ಚನ್ ಹವರ್ ಮುಗಿದಿದೆ, ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ, ಇದು ನನ್ನ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಶ್ನೆ, ಆದ್ದರಿಂದ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಪ್ರಶ್ನೆ ಹಾಕುವುದಕ್ಕೆ ಇಚ್ಛಿಸುತ್ತೇನೆ.

ಅಧ್ಯಕ್ಷರು —ಕಳ್ಳರ ಕಾಟ ಬಿಟ್ಟುಬಿಟ್ಟು, ಸೊಳ್ಳೆ ಕಾಟಕ್ಕೆ ಇಷ್ಟೊಂದು ಮಹತ್ವ ಕೊಡುತ್ತಿದ್ದೀರಲ್ಲ ?

ಶ್ರೀ ಬಿ. ಬಸವಲಿಂಗಪ್ಪ.—ಚೋಳನಾಯಕನ ಹಳ್ಳಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಪ್ರದೇಶ. ನಗರ ಪ್ರದೇಶದ ಸುತ್ತಮುತ್ತ ಇರತಕ್ಕ ಹಳ್ಳಿಗಳನ್ನು ಕಾರ್ಪೊರೇಷನ್‌ಗೆ ಸೇರಿಸಿಕೊಂಡು, ಇಂತಹ ಕೊಂದರೆಗಳನ್ನು ಪರಿಹಾರ ಮಾಡಬೇಕೆಂದು, ಕಾಂಗ್ರೆಸ್ ಪಕ್ಷದವರು ಅಧಿಕಾರದಲ್ಲಿದ್ದಾಗಲೇ ಒಂದು ನೋಟಿಫಿಕೇಷನ್ ಮಾಡಿದ್ದೇವೆ. ನಾನು ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ಪತ್ರ ಬರೆದು ಅರಿಕೆ ಮಾಡಿಕೊಂಡಿದ್ದೆ. ಆ ನೋಟಿಫಿಕೇಷನ್ ಏನಿದೆ ಅದನ್ನು ಪುನಃ ಮಾಡಿ, ಇದನ್ನು ಕಾರ್ಪೊರೇಷನ್‌ನವರು ಒಪ್ಪುವಹಾಗೆ ಮಾಡಬೇಕೆಂದು ತಿಳಿಸಿದ್ದೆ. ಅದನ್ನು ಮುಖ್ಯ ಮಂತ್ರಿಗಳು ಕಾರ್ಪೊರೇಷನ್‌ನವರಿಗೆ ಕಳುಹಿಸಿದ್ದಾರೆ. ಆದರೆ ಒಂದೂ ವರ್ಷ ಆಗಿದೆ, ಆದರೂ ಕಾರ್ಪೊರೇಷನ್ ನವರು ಇದುವರೆಗೂ ಏನನ್ನೂ ಮಾಡಿಲ್ಲ. ಈ ಹಳ್ಳಿಗಳನ್ನು ಕಾರ್ಪೊರೇಷನ್‌ಗೆ ಸೇರಿಸಿದರೆ ಇದೆಲ್ಲಾ ನ್ಯೂನತೆಗಳು ಏನಿವೆ ಅವು ಪರಿಹಾರ ಆಗುತ್ತವೆ. ಅದುದರಿಂದ ಇದನ್ನು ಜಾರಿಗೊಳಿಸಿ, ಇದರ ಬಗ್ಗೆ ಪರಿಹಾರ ಕಲ್ಪಿಸಬೇಕು.

ಶ್ರೀ ಬಿ. ರಾಚಯ್ಯ — ಈ ಪ್ರಶ್ನೆಯನ್ನು ಅವರು ಮುಖ್ಯ ಮಂತ್ರಿಗಳಿಗೆ ಕೇಳಿದ್ದಾರೆ. ಆದುದರಿಂದ ನಾನು ಏನೂ ಉತ್ತರ ಹೇಳುವ ಹಾಗೆ ಇಲ್ಲ ಅದಕ್ಕೋಸ್ಕರ ಸುಮ್ಮನೆ ಕುಳಿತಿಕೊಂಡೆ. ಇದು ಹೆಚ್.ಯು.ಡಿ.ಗೆ ಸೇರಿರತಕ್ಕದ್ದು. ಇದರ ಬಗ್ಗೆ ತಾವು ಬೇರೆ ಪ್ರಶ್ನೆ ಕೇಳಬಹುದು.

ಶ್ರೀ ಬಿ ಬಸವಲಿಂಗಪ್ಪ — ಮಾನ್ಯ ಮುಖ್ಯಮಂತ್ರಿಗಳೇ, ನಾನಂ ಇದರ ಬಗ್ಗೆ ತಮಗೆ ಕಾಗದ ಬರೆದಿರುತ್ತೇನೆ. ಇದಕ್ಕೆ ತಾವೇ ಉತ್ತರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವಲಿಂಗಪ್ಪನವರ ಸೂಚನೆ ಏನೆಂದರೆ, ಕೆಲವು ಪ್ರದೇಶಗಳನ್ನು ಕಾರ್ಪೊರೇಷನ್ ವ್ಯಾಪ್ತಿ ಒಳಗೆ ಸೇರಿಸಿಬಿಡಲಾಯಿತು ಎಂದರೆ ಎಲ್ಲಾ ಸಮಸ್ಯೆಗಳೂ ಪರಿಹಾರವಾಗುತ್ತವೆ ಎನ್ನುವ ಅಭಿಪ್ರಾಯ ಇದೆ. ಅದನ್ನು ನಾನಂತೂ ಸಂಪೂರ್ಣವಾಗಿ ಒಪ್ಪುವುದಿಲ್ಲ. ಆದರೂ ಹಿಂದೆ ಹಳ್ಳಿಗಳಾಗಿದ್ದಂತಹ ಅನೇಕ ಪ್ರದೇಶಗಳು ಇಂದು ಬೆಂಗಳೂರು ನಗರ ಬೆಳೆಯುತ್ತಿರತಕ್ಕಂಥ ಸಂದರ್ಭದಲ್ಲಿ ಬೆಂಗಳೂರು ನಗರದ ಹೊಟ್ಟೆಯ ಒಳಗಡೆ ಸೇರಿಕೊಂಡು ಬಿಟ್ಟಿವೆ. ಆದರೂ ಇವು ಕಾರ್ಪೊರೇಷನ್ ವ್ಯಾಪ್ತಿಗೆ ಬಂದಿಲ್ಲ. ಅಮಾ ಸೂಚನೆಯನ್ನು ನಾನು ಮಾನ್ಯ ಮಾಡ ಬಹುದು. ಅದನ್ನು ಮಾನ್ಯ ಮಾಡುವುದರೊಳಗೆ ಏನೂ ತೊಂದರೆ ಇಲ್ಲ. ಈ ವಿಚಾರದಲ್ಲಿ ನಾನು ಮೇಯರ್‌ರವರ ಜೊತೆಗೆ ಮಾಗೂ ಕಾರ್ಪೊರೇಷನ್ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿದ್ದೇನೆ. ಅವರು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಆದರ ಇದರಲ್ಲಿ ಈ ಏರಿಯಾವನ್ನು ನಾವು ನಗರದ ಒಳಗಡೆ ಸೇರಿಸಿದ ತಕ್ಷಣ ಸೊಳ್ಳೆಗಳು ಹೋಗಿಬಿಡುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.— ಇಂಪ್ರೂವ್‌ಮೆಂಟ್ ಆಗುತ್ತದೆ, ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಸೊಳ್ಳೆ ಕಾಟ ಹೋಗುವುದು ಯಾವಾಗ ಎಂದರೆ, ನಮ್ಮಲ್ಲಿ ಅನೇಕ ಕಡೆ ಕೊಳಚೆ ನೀರು ಓಪನ್‌ಗಟಾರದ ಒಳಗೆ ಹೋಗುತ್ತಿದೆ. ಇದು ಎಲ್ಲಿಯವರೆಗೆ ನಿಲ್ಲುವುದಿಲ್ಲವೊ ಅಲ್ಲಿಯವರೆಗೆ ಸೊಳ್ಳೆ ಕಾಟ ಹೋಗುವುದಿಲ್ಲ.

ಪ್ರಶ್ನೆ ಸಂಖ್ಯೆ ೩೭ (೧೦೯)

ಶ್ರೀ ಪ್ರಭಾಕರ್ ಎಸ್. ರಾಣೆ.— ಮಾನ್ಯ ಸದಸ್ಯರು ಗೈರುಹಾಜರಾಗಿದ್ದರು.

ಪೋಲೀಸ್ ಇಲಾಖೆಯಲ್ಲಿರುವ ಮಹಿಳಾ ಪೋಲೀಸರು

೩೭. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).— ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಪೋಲೀಸ್ ಇಲಾಖೆಯಲ್ಲಿ ಎಷ್ಟು ಮಂದಿ ಮಹಿಳಾ ಪೋಲೀಸ್‌ನವರಿದ್ದಾರೆ ;

ಆ) ಇವರಲ್ಲಿ ಎಸ್.ಪಿ.ಡಿ.ವೈ.ಎಸ್.ಪಿ. ಇನ್‌ಸ್ಪೆಕ್ಟರ್ ಹಾಗೂ ಸಬ್‌ಇನ್ಸ್‌ಪೆಕ್ಟರ್ ಹುದ್ದೆಯಲ್ಲಿರುವವರ ಸಂಖ್ಯೆ ಎಷ್ಟು;

ಇ) ಮಹಿಳಾ ಪೋಲೀಸರಿಗೆ ತರಬೇತಿ ನೀಡಲು ಪ್ರತ್ಯೇಕವಾದ ತರಬೇತಿ ಕೇಂದ್ರ ತೆರೆಯಲಾಗಿದೆಯೇ?

ಶ್ರೀ ಆರ್.ಎಲ್. ಜಾಲಪ್ಪ (ಗೃಹಮಂತ್ರಿಗಳು).—

ಅ) ಮಹಿಳಾ ಪೋಲೀಸ್‌ನವರ ಸಂಖ್ಯೆ: ೩೨೪.

ಆ) ಎಸ್.ಪಿ. (ಐಪಿಎಸ್) ೩

ಡಿ.ವೈ.ಎಸ್.ಪಿ. —

ಇನ್ಸ್‌ಪೆಕ್ಟರ್ —

ಸಬ್‌ಇನ್ಸ್‌ಪೆಕ್ಟರ್ ೨೬

ಇ) ಐಪಿಎಸ್ ಮಹಿಳೆಯರಿಗೆ ಪ್ರತ್ಯೇಕವಾದ ಪೋಲೀಸ್ ತರಬೇತಿ ಕೇಂದ್ರವಿರುವುದಿಲ್ಲ. ಇವರುಗಳು ಪೋಲೀಸ್ ಪೋಲೀಸ್ ತರಬೇತಿ ಅಕಾಡಮಿ, ಹೈದರಾಬಾದ್ ಹಾಗು ಪೋಲೀಸ್ ತರಬೇತಿ ಕಾಲೇಜು ಮೈಸೂರು ಇಲ್ಲಿ ಪುರುಷ ಕೆಡೆಟ್‌ಗಳ ಜೊತೆಯಲ್ಲಿ ತರಬೇತಿಯನ್ನು ಪಡೆಯುತ್ತಾರೆ.

ಪತ್ರಾಂಕಿತರಲ್ಲದ ಮಹಿಳೆಯರಿಗೆ ಮೈಸೂರಿನ ಪೋಲೀಸ್ ತರಬೇತಿ ಕಾಲೇಜಿನಲ್ಲಿ ಪ್ರತ್ಯೇಕವಾಗಿ ತರಬೇತಿಯನ್ನು ನೀಡಲಾಗುತ್ತಿದೆ.

ಶ್ರೀ ವೇದಾಂತ ಹೆಮ್ಮಿಗೆ — ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ೧೭೫ ತಾಲ್ಲೂಕುಗಳು ಇವೆ. ಇವರ ಪೋಲೀಸ್ ಇಲಾಖೆಯಲ್ಲಿ ೩೨೪ ಜನ ಮಹಿಳಾ ಪೋಲೀಸ್ ಪೇದೆಗಳು ಇದ್ದಾರೆ, ಇದನ್ನು ನೋಡಿದರೆ ಒಂದು ತಾಲ್ಲೂಕಿಗೆ ಎರಡು ಜನರೂ ಇಲ್ಲ. ೨೬ ಜನ ಮಹಿಳಾ ಪೋಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳು ಇದ್ದಾರೆ. ಇಡೀ ಪೋಲೀಸ್ ಇಲಾಖೆಯ ಬಲವನ್ನು ತೆಗೆದುಕೊಂಡರೆ ಇದು ನೆಗ್ಲಿಜಬಲ್. ಆದುದರಿಂದ ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ ಇಷ್ಟು ಕಡಿಮೆ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳು ಪೋಲೀಸ್ ಇಲಾಖೆಗೆ ಬರುತ್ತಿರಬೇಕಾದರೆ, ಅವರು ಪೋಲೀಸ್ ಇಲಾಖೆಯಲ್ಲಿ ಕೆಲಸಕ್ಕೆ ಕರೆದಾಗ ಅರ್ಜಿ ಹಾಕುತ್ತಿದ್ದಾರೆಯೇ? ಸಬ್‌ಇನ್‌ಸ್ಪೆಕ್ಟರ್ ಹುದ್ದೆಗೆ ಕರೆದಾಗ ಪೇದೆ ಕೆಲಸಕ್ಕೆ ಕರೆದಾಗ ಹೆಣ್ಣುಮಕ್ಕಳು ತಾವಾಗಿಯೇ ಮುಂದೆ ಬಂದು ಅರ್ಜಿ ಹಾಕುತ್ತಿದ್ದಾರೆಯೇ? ಇಲ್ಲವೇ ಅರ್ಜಿ ಹಾಕಿದರೂ ಅವರನ್ನು ನೀವು ಸೆಲೆಕ್ಟ್ ಮಾಡುತ್ತಿದ್ದೀರಾ ಅಥವಾ ಇಲ್ಲವೇ? ನಮ್ಮಲ್ಲಿ ಸಾಮಾನ್ಯವಾಗಿ ಹೆಣ್ಣು ಮಕ್ಕಳು ಪ್ರಾಮಾಣಿಕರು ಎಂದು ಹೆಸರು ತೆಗೆದುಕೊಂಡಿದ್ದಾರೆ. ಅವರು ಪ್ರಾಮಾಣಿಕರು ಎಂದು ನಾವು ಒಪ್ಪಿಕೊಂಡಿದ್ದೇವೆ. ಸಾಮಾನ್ಯವಾಗಿ ನಮ್ಮಲ್ಲಿ ಪ್ರಾಮಾಣಿಕತೆಗೆ ಹೆಂಗಸರು ಹೆಸರಂ ಪಡೆದಿದ್ದಾರೆ. ಹೆಣ್ಣು ಮಕ್ಕಳು ಜಾಸ್ತಿ ಸಂಖ್ಯೆಯಲ್ಲಿ ಪೋಲೀಸ್ ಇಲಾಖೆಯಲ್ಲಿದ್ದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.